
# ಸತ್ಯಯುಗದ ಪ್ರವರ್ತಕ ಶ್ರೀರಾಮಕೃಷ್ಣರು

ಸ್ವಾಮಿ ದೇಶಿಕಾತ್ಮಾನಂದ



**ಭಾ**ರತ ಅತ್ಯಂತ ಪ್ರಾಚೀನ ರಾಷ್ಟ್ರ. 'ಭಾ' ಎಂದರೆ ಜ್ಯೋತಿ. 'ರತ' ಎಂದರೆ ತಲ್ಲೀನರಾಗಿರುವುದು. ಭಾರತ ದೇಶವು ಅರಿವಿನ ಪ್ರಜ್ಞೆಯಲ್ಲಿ ತಲ್ಲೀನರಾಗಿರುವವರು ವಾಸಿಸುವ ಪುಣ್ಯಭೂಮಿ ಎಂದು ಇದರಿಂದ ಸ್ಪಷ್ಟವಾಗುತ್ತದೆ. ನಮ್ಮ ಋಷಿಮುನಿಗಳು ಆ ಜ್ಯೋತಿಯ ದರ್ಶನ ಪಡೆದ ಮಹಾನುಭಾವರು. ಅದನ್ನು ಅವರು ಅತೀಂದ್ರಿಯ ಅನುಭವಗಳ ಮೂಲಕ ಸಿದ್ಧಿಸಿಕೊಂಡಿದ್ದರು. ಈ ಪುಣ್ಯಭೂಮಿಯ ಇತಿಹಾಸದುದ್ದಕ್ಕೂ ಬಾಹ್ಯ ಮತ್ತು ಆಂತರಿಕ ಸತ್ಯಾನ್ವೇಷಣೆಗಳು ಜೊತೆಜೊತೆಗೇ ಸಾಗಿದ್ದನ್ನು ನಾವು ನೋಡುತ್ತೇವೆ. ಬಾಹ್ಯಾನ್ವೇಷಣೆಯು ಭೌತಿಕ ವಿಜ್ಞಾನದ ಪ್ರಗತಿಗೆ ಕಾರಣವಾಗಿದ್ದರೆ, ಆಂತರಿಕ ಅನ್ವೇಷಣೆಯು ಆಧ್ಯಾತ್ಮಿಕ ಉನ್ನತಿಗೆ ಕಾರಣವಾಯಿತು.

ಇಂತಹ ಸನಾತನ ಧರ್ಮದ ಚಿರಂತನ ಸತ್ಯಗಳನ್ನು ಪುನಃ ಸಂಸ್ಥಾಪಿಸಲು ಮತ್ತು ಎಲ್ಲ ಬಗೆಯ ವೈವಿಧ್ಯಮಯ ಭಾವನೆಗಳನ್ನು ಸಮನ್ವಯಗೊಳಿಸಿ ಇಡೀ ಪ್ರಪಂಚದಲ್ಲಿ ಆಧ್ಯಾತ್ಮಿಕ ಚೇತನವನ್ನುಂಟುಮಾಡಲು ಭಗವಂತನು ಶ್ರೀರಾಮಕೃಷ್ಣರಾಗಿ ಧರೆಗಿಳಿದು ಬಂದನು. ಪವಿತ್ರವಾದ ಗಂಗೆಯು ತನ್ನನ್ನು ಸ್ಪರ್ಶಿಸಿದವರೆಲ್ಲರನ್ನೂ ಪುನೀತಗೊಳಿಸುತ್ತದೆ. ಹಾಗೆಯೇ ಶ್ರೀರಾಮಕೃಷ್ಣರ ಪವಿತ್ರನಾಮವೂ ಕೂಡ, ಭಕ್ತಿಭರಿತರಾಗಿ ಉಚ್ಚರಿಸುವವರ ಮನಸ್ಸುಗಳನ್ನು ಪರಿಶುದ್ಧಗೊಳಿಸುವುದು; ಸಂಸಾರವನ್ನು ದಾಟಿಹೋಗುವಂತೆ ಮಾಡಿ, ಭವದ ಭಯವನ್ನು ನೀಗುವುದು.

### ಸತ್ಯಯುಗ

ಶ್ರೀರಾಮಕೃಷ್ಣರ ಅವತರಣದೊಂದಿಗೆ ಈ ಲೋಕದಲ್ಲಿ ಸತ್ಯಯುಗದ ಅನಾವರಣವಾಯಿತು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅವರು ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಪತ್ರದಲ್ಲಿ ಹೀಗೆ ಬರೆಯುತ್ತಾರೆ:

೧. ಶ್ರೀರಾಮಕೃಷ್ಣರ ಅವತಾರ ಪ್ರಾರಂಭವಾದ ದಿನದಿಂದಲೇ ಸತ್ಯಯುಗ ಮೊದಲಾಗಿದೆ.

೨. ಈ ಅವತಾರದಲ್ಲಿ ನಾಸ್ತಿಕ ಭಾವಗಳು ಜ್ಞಾನಖಡ್ಗದಿಂದ ಕತ್ತರಿಸಲ್ಪಡುವುವು. ಭಕ್ತಿ ಮತ್ತು ಪ್ರೇಮದಿಂದ ಪ್ರಪಂಚವೇ ಒಂದಾಗುವುದು. ಅದೂ ಅಲ್ಲದೆ, ಈ ಅವತಾರದಲ್ಲಿ ರಜಸ್ಸು ಅಂದರೆ, ಕೀರ್ತಿ ಗೌರವಗಳ ಆಸೆ ಸಂಪೂರ್ಣ ಮಾಯವಾಗಿ ಹೋಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಯಾರು ಅವರ ಉಪದೇಶದಂತೆ ನಡೆಯುವರೋ ಅವರು ಧನ್ಯರು; ಜನರು ಅವರನ್ನು ಒಪ್ಪಲಿ ಒಪ್ಪದಿರಲಿ ಏನೂ ಬಾಧಕವಿಲ್ಲ.

೩. ವೇದವೇದಾಂತಗಳು, ಉಳಿದ ಅವತಾರಗಳು, ಯಾವುದನ್ನು ಹಿಂದೆ ಬೋಧಿಸಿದ್ದವೋ ಅವೆಲ್ಲವನ್ನೂ ಶ್ರೀರಾಮಕೃಷ್ಣರು ಅನುಷ್ಠಾನಕ್ಕೆ ತಂದರು. ಇವರ ಜೀವನವನ್ನು ತಿಳಿದುಕೊಳ್ಳದೆ ವೇದ ವೇದಾಂತ ಮತ್ತು ಅವತಾರಗಳನ್ನು ತಿಳಿದುಕೊಳ್ಳಲಾಗುವುದಿಲ್ಲ. ಏತಕ್ಕೆಂದರೆ, ಅವುಗಳನ್ನೇ ಶ್ರೀರಾಮಕೃಷ್ಣರು ಅನುಷ್ಠಾನಕ್ಕೆ ತಂದರು.

೪. ಇವರು ಜನ್ಮಧಾರಣೆ ಮಾಡಿದ ದಿನದಿಂದಲೇ ಸತ್ಯಯುಗ ಪ್ರಾರಂಭವಾಯಿತು. ಇನ್ನು ಮೇಲೆ ಎಲ್ಲಾ ವಿಧವಾದ ಭೇದಭಾವಗಳೂ ಕೊನೆಗಾಣುವುವು. ಚಂಡಾಲನಿಂದ ಹಿಡಿದು ಪ್ರತಿಯೊಬ್ಬರೂ ಅವರ ಪ್ರೀತಿಗೆ ಪಾತ್ರರಾಗುವರು. ಗಂಡಸರು, ಹೆಂಗಸರು, ಶ್ರೀಮಂತ, ಬಡವ, ಪಂಡಿತ, ಪಾಮರ, ಬ್ರಾಹ್ಮಣ, ಚಂಡಾಲ – ಈ ಎಲ್ಲ ಭೇದಭಾವಗಳನ್ನೂ ಖಂಡಿಸುವುದಕ್ಕಾಗಿ ಅವರು ಬದುಕಿದರು. ಶಾಂತಿಯನ್ನು ಹರಡುವ ದೇವದೂತರಿವರು. ಹಿಂದೂಗಳಿಗೂ, ಕ್ರೈಸ್ತರಿಗೂ ಇರುವ ಭೇದಗಳೆಲ್ಲಾ ಗತಕಾಲಕ್ಕೆ ಸಂಬಂಧಿಸಿದ್ದು. ಅನ್ಯೋನ್ಯ ಮತಕಲಹ ಗತಯುಗದ

ಸತ್ಯಯುಗವು ಶ್ರೀರಾಮಕೃಷ್ಣರ ಜನ್ಮದೊಂದಿಗೆ ಆರಂಭವಾಯಿತು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅದರ ತಾತ್ತ್ವಿಕ ಹಿನ್ನೆಲೆಯನ್ನು ಸರಳವಾಗಿ ನಿರೂಪಿಸಿರುವ ಪೂಜ್ಯ ಸ್ವಾಮೀಜಿಯವರು ಚೆನ್ನೈನಲ್ಲಿರುವ ರಾಮಕೃಷ್ಣ ಮಿಷನ್ ವಿದ್ಯಾರ್ಥಿ ನಿಲಯದ ಮುಖ್ಯಸ್ಥರು.

ಮಾತು. ಈ ಸತ್ಯಯುಗದಲ್ಲಿ ಶ್ರೀರಾಮಕೃಷ್ಣರೆಂಬ ಮಹಾ ಪ್ರವಾಹವು ಎಲ್ಲರನ್ನೂ ಒಂದೇ ಸಮನಾಗಿ ರೂಪಿಸಿರುವುದು. (ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೪, ಪುಟಗಳು ೩೬೯, ೩೭೬)

ಮೇಲಿನ ವಾಕ್ಯಗಳ ಮಹತ್ವವನ್ನು ಅರ್ಥಮಾಡಿಕೊಂಡವರು ವಿರಳ. ಇದಕ್ಕಾಗಿ ಗಂಭೀರ ಅಧ್ಯಯನ ಮತ್ತು ಚಿಂತನೆಯ ಆವಶ್ಯಕತೆ ಇದೆ.

ನಮ್ಮ ಪುರಾಣಗಳು ಸತ್ಯಯುಗ ಅಥವಾ ಕೃತಯುಗದಲ್ಲಿ ಧರ್ಮವು ತನ್ನ ನಾಲ್ಕೂ ಪಾದಗಳಲ್ಲಿ ನೆಲೆನಿಂತಿರುವುದು ಎಂದು ಹೇಳುತ್ತವೆ. ಭಾಗವತ ಪುರಾಣದಲ್ಲಿ ಬಣ್ಣಿಸಲಾದ ಆ ನಾಲ್ಕು ಪಾದಗಳೆಂದರೆ, **ಸತ್ಯ, ಅನುಕಂಪ, ತಪಸ್ಸು ಮತ್ತು ದಾನ**. ಮೋಸ, ವಂಚನೆಗಳಿಂದ ತುಂಬಿದ ಕಲಿಯುಗದ ಸ್ಥಿತಿಯಿಂದ ಮೇಲಿನ ದೈವೀಗುಣಗಳಿಂದ ಕೂಡಿದ ಸತ್ಯಯುಗದ ಅಸ್ತಿತ್ವಕ್ಕೆ ಮಾನವತೆಯನ್ನು ಕರೆದುಕೊಂಡು ಹೋಗಲೆಂದೇ ಅವತಾರಪುರುಷರು ಹುಟ್ಟಿಬರುವರು. ಈ ಕಾರ್ಯವು ಸಾಧಾರಣ ಸಿದ್ಧರಿಗೆ ಅಥವಾ ಯೋಗಿಗಳಿಗೆ ಸಾಧ್ಯವಿಲ್ಲ. ಅಂತಹ ಅವತಾರಪುರುಷರಲ್ಲಿ ಶ್ರೀರಾಮಕೃಷ್ಣರು ಶ್ರೇಷ್ಠರಾದವರು ಎನ್ನುವುದೇ ಸ್ವಾಮಿ ವಿವೇಕಾನಂದರ ಮಾತಿನ ಅಭಿಪ್ರಾಯ.

### ಅವತಾರದ ಅಪೂರ್ವ ಚಿಹ್ನೆಗಳು

ಶ್ರೀರಾಮಕೃಷ್ಣರು ಅವತಾರಪುರುಷರು ಎನ್ನುವುದಕ್ಕೆ ಅವರ ಜೀವನದ ಅನೇಕ ಘಟನೆಗಳು ಪುಷ್ಟಿಕೊಡುತ್ತವೆ. ಅವರ ತಂದೆ ಕ್ಷುದಿರಾಮರು ಗಯಾಧಾಮಕ್ಕೆ ಹೋಗಿದ್ದಾಗ, ಅಲ್ಲಿನ ಆರಾಧ್ಯದೇವತೆಯಾದ ಗದಾಧರ ವಿಷ್ಣುವು ಅವರ ಕನಸಿನಲ್ಲಿ ಕಾಣಿಸಿಕೊಂಡನು; ನಿನ್ನ ಮನೆಯಲ್ಲಿ ಹುಟ್ಟುತ್ತೇನೆಂದು ಹೇಳಿದನು. ಹಾಗೆಯೇ ಶ್ರೀರಾಮಕೃಷ್ಣರ ತಾಯಿ ಚಂದ್ರಮಣೀ ದೇವಿಯವರಿಗೂ ಕೂಡ ಅನೇಕ ದರ್ಶನಗಳಾದವು. ನಂತರವೇ ಶ್ರೀರಾಮಕೃಷ್ಣರು ಆ ಪುಣ್ಯದಂಪತಿಗಳಿಗೆ ಮಗನಾಗಿ ಹುಟ್ಟಿದರು.

ಶ್ರೀರಾಮಕೃಷ್ಣರ ಬಾಲ್ಯವೂ ಇಂತಹ ಅನೇಕ ಅದ್ಭುತ ಘಟನೆಗಳಿಂದ ಕೂಡಿದೆ. ಏಳನೆಯ ವಯಸ್ಸಿನವನಾಗಿರುವಾಗ, ಬಾಲಕ ಗದಾಧರನು ಹೊಲದ ಬದಿಯಲ್ಲಿ ಪುರಿಯನ್ನು ತಿನ್ನುತ್ತ ನಡೆದುಕೊಂಡು ಹೋಗುತ್ತಿದ್ದನು. ಆ ಸಮಯದಲ್ಲಿ ಕಪ್ಪು ಮೋಡಗಳ ಹಿನ್ನೆಲೆಯಲ್ಲಿ ಶ್ವೇತವರ್ಣದ ಕೊಕ್ಕರೆಗಳು ಸಾಲು ಸಾಲಾಗಿ ಹಾರುತ್ತಿದುದನ್ನು ಕಂಡನು. ಪ್ರಕೃತಿ ಸೌಂದರ್ಯದ ಈ ದೃಶ್ಯ ಅದರ ನಿರ್ಮಾಪಕನಾದ ಭಗವಂತನ ಪ್ರಜ್ಞೆಯಲ್ಲಿ ಲೀನನಾಗುವಂತೆ ಆ ಬಾಲಕನನ್ನು ಪ್ರಚೋದಿಸಿತು. ಭಾವಸ್ಥಿತಿಗೆ ಏರಿದ ಅವನು ಪ್ರಜ್ಞಾಶೂನ್ಯನಾದನು. ಇದು ಶ್ರೀರಾಮಕೃಷ್ಣರು ಪಡೆದ ಮೊದಲ ಭಾವಸಮಾಧಿ. ಹಾಗೆಯೇ ಅಣೂರು ಎಂಬಲ್ಲಿದ್ದ ವಿಶಾಲಾಕ್ಷಿ ದೇವಾಲಯಕ್ಕೆ ಹೋಗುವಾಗಲೂ ಇದೇ ಬಗೆಯ ಭಾವ ಅವರಿಗೆ ಉಂಟಾಗಿತ್ತು. ಶಿವರಾತ್ರಿಯಂದು ಶಿವನ ಪಾತ್ರವನ್ನು ಮಾಡುವಾಗಲೂ ಆಧ್ಯಾತ್ಮಿಕ ಭಾವ ಅವರ ಮೈಮನಸ್ಸುಗಳನ್ನು ಆವರಿಸಿಕೊಂಡಿತ್ತು.

ಬಳಿಕ ದಕ್ಷಿಣೇಶ್ವರದಲ್ಲಿ ಹನ್ನೆರಡು ವರ್ಷಗಳ ಸುದೀರ್ಘ ಕಾಲ ಅವರು ಕೈಕೊಂಡ ಸಾಧನೆಗಳು ಮತ್ತು ತಪಸ್ಸು ಸಾಧಾರಣ ಮಾನವನ ಸಾಮರ್ಥ್ಯಕ್ಕೆ ಮೀರಿದುದು. ಶ್ರೀರಾಮಕೃಷ್ಣರು ವೈಷ್ಣವ ಶಾಸ್ತ್ರಗಳಲ್ಲಿ ಹೇಳಿರುವ ೬೪ ತಂತ್ರ ಸಾಧನೆಗಳನ್ನು ತಮ್ಮ ಗುರು ಭೈರವೀ ಬ್ರಾಹ್ಮಣಿಯ ಮಾರ್ಗದರ್ಶನದಲ್ಲಿ ಕೈಕೊಂಡು, ಕೇವಲ ಸ್ವಲ್ಪ ಸಮಯದಲ್ಲಿಯೇ ಅವುಗಳಲ್ಲಿ ಸಿದ್ಧಿಯನ್ನು ಪಡೆದರು. ಅದ್ವೈತ ಸಂನ್ಯಾಸಿ ತೋತಾಪುರಿ ಬೋಧಿಸಿದ ಧ್ಯಾನ ಮಾರ್ಗವನ್ನು ಹಿಡಿದು, ಕೇವಲ ನಾಲ್ಕು ದಿನಗಳಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಪಡೆದುದಷ್ಟೇ ಅಲ್ಲ, ಆರು ತಿಂಗಳ ಸುದೀರ್ಘ ಕಾಲ ಆ ಅವಸ್ಥೆಯಲ್ಲಿಯೇ ಮುಳುಗಿದ್ದರು. ಅಷ್ಟೂ ಅಲ್ಲದೆ, ಅವರು ಇಸ್ಲಾಂ ಮತ್ತು ಕ್ರೈಸ್ತ ಮತಗಳ ಸಾಧನೆಗಳನ್ನೂ ಮಾಡಿ, 'ಮತಗಳೆಷ್ಟೋ ಅಷ್ಟು ಪಥಗಳು' ಎಂಬ ಉದಾರ ಸಂದೇಶವನ್ನು ಜಗತ್ತಿಗೆ ನೀಡಿದರು. ಇವೆಲ್ಲವೂ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ತತ್ತ್ವದ ಪರಮ ಅಭಿವ್ಯಕ್ತಿಯಾದ ಅವತಾರಪುರುಷರೆನ್ನುವುದನ್ನು ನಿಸ್ಸಂದೇಹವಾಗಿ ಸಾಬೀತು ಮಾಡುವುವು.

### ಅನುಗ್ರಹ ಶಕ್ತಿ

ಅವತಾರಪುರುಷರ ಪ್ರಮುಖ ಲಕ್ಷಣಗಳಲ್ಲಿ ಅನುಗ್ರಹ ಶಕ್ತಿಯೂ ಒಂದು. ಶ್ರೀರಾಮಕೃಷ್ಣರ ಒಂದು ಸ್ಪರ್ಶ ಅಥವಾ ನೋಟ, ಜನ್ಮಜನ್ಮಾಂತರಗಳಿಂದ ಸೇರಿಕೊಂಡಿದ್ದ ಸಂಸ್ಕಾರಗಳ ಪರ್ವತವನ್ನೂ ಒಮ್ಮೆಗೇ ಸುಟ್ಟು ಬೂದಿ ಮಾಡುವ ಅಪಾರ ಶಕ್ತಿಯನ್ನು ಹೊಂದಿತ್ತು. ಸ್ವಾಮಿ ವಿವೇಕಾನಂದರು ಹೇಳುವಂತೆ, ಸಮಾಜದ ಅತ್ಯಂತ ಕೊನೆಯ ಮನುಷ್ಯನವರೆಗೂ ಶ್ರೀರಾಮಕೃಷ್ಣರ ಪ್ರೇಮಪ್ರವಾಹವು ಹರಿಯುತ್ತಿತ್ತು. ಅದಕ್ಕೆ ಉತ್ತಮ ನಿದರ್ಶನವೆಂದರೆ, ಕಾಳೀ ದೇವಸ್ಥಾನದಲ್ಲಿ ಕಸಗುಡಿಸುವ ಕೆಲಸ ಮಾಡುತ್ತಿದ್ದ ರಸಿಕನನ್ನು ಅವರು ಅನುಗ್ರಹಿಸಿದ್ದು. ಒಂದು ದಿನ ರಸಿಕನು ಶ್ರೀರಾಮಕೃಷ್ಣರ ಕಾಲಿಗೆ ಬಿದ್ದು ತನಗೆ ಮುಕ್ತಿ ನೀಡಿ ಅನುಗ್ರಹಿಸಬೇಕೆಂದು ಬೇಡಿಕೊಂಡನು. ಅದರಂತೆಯೇ, ತನ್ನ ಸಾವಿನ ಸಮಯದಲ್ಲಿ ಶ್ರೀರಾಮಕೃಷ್ಣರ ದರ್ಶನವನ್ನು ಪಡೆದು, ಅವರ ಪವಿತ್ರ ನಾಮವನ್ನು ಉಚ್ಚರಿಸುತ್ತ ಪ್ರಾಣಬಿಟ್ಟನು. ಶ್ರೀರಾಮಕೃಷ್ಣರ ಜೊತೆಯಲ್ಲಿ ಪ್ರತಾಪಚಂದ್ರ ಹಾಜರಾ ಎಂಬುವವನು ಕೆಲವು ಕಾಲ ವಾಸಿಸುತ್ತಿದ್ದನು. ಅವನೊಬ್ಬ ಆಷಾಢಭೂತಿ. ಅವನದು ಬರೀ ಒಣ ವೇದಾಂತ. ಕೆಲವೊಮ್ಮೆ ಅವನು ಶ್ರೀರಾಮಕೃಷ್ಣರನ್ನೂ ಟೀಕಿಸುತ್ತಿದ್ದನು. ದಯಾಮಯರಾದ ಶ್ರೀರಾಮಕೃಷ್ಣರು ಅವನನ್ನು ಕ್ಷಮಿಸಿದರು ಮಾತ್ರವಲ್ಲ, ಅವನು ತನ್ನ ಮರಣ ಸಮಯದಲ್ಲಿ ಶ್ರೀರಾಮಕೃಷ್ಣರ ನಾಮವನ್ನು ಉಚ್ಚರಿಸುತ್ತ ದೇಹತ್ಯಾಗ ಮಾಡಿದನು. ಇವೆಲ್ಲ ನಿದರ್ಶನಗಳು ಶ್ರೀರಾಮಕೃಷ್ಣರು ತಮ್ಮ ಮನಸ್ಸಿನಲ್ಲಿ ಜೀವಿಗಳನ್ನು ಸಂಸಾರ ಬಂಧನದಿಂದ ಬಿಡಿಸಿ ಮುಕ್ತರನ್ನಾಗಿ ಮಾಡುವ ಅನನ್ಯ ಶಕ್ತಿಯನ್ನು ಹೊಂದಿದ್ದರೆನ್ನುವುದನ್ನು ತೋರಿಸುತ್ತವೆ. ಈ ಬಗೆಯ

ಅನುಗ್ರಹ ಶಕ್ತಿಯು ಕೇವಲ ಅವತಾರಪುರುಷರಿಗೆ ಮಾತ್ರ ಇರುವುದು ಸಾಧ್ಯ.

**ದಿವ್ಯಲೀಲೆಗಳ ಉಪಯೋಗ**

ಒಂದೇ ದಿವ್ಯ ವ್ಯಕ್ತಿತ್ವವು ಈಶ್ವರನಾಗಿ ಇದ್ದುಕೊಂಡು, ವಿಭಿನ್ನ ವ್ಯಕ್ತಿಭಾವಗಳನ್ನು ತಳೆದು, ಕಾಲಕಾಲಕ್ಕೆ ಅವತಾರಗಳ ರೂಪದಲ್ಲಿ ಪ್ರಕಟಗೊಳ್ಳುತ್ತದೆ ಎಂದು ಸ್ವಾಮಿ ತಪಸ್ಯಾನಂದರು ಹೇಳುತ್ತಾರೆ. ಈ ಅವತಾರರೂಪವು ಭಗವಂತನ ಅನುಗ್ರಹಶಕ್ತಿಯ ಪ್ರತಿರೂಪವಾಗಿದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಲೀಲಾವತಾರ ಅಥವಾ ಅಂಶಾವತಾರವೆಂಬುದು ಮಾನವ ಮತ್ತು ಭಗವಚ್ಛಕ್ತಿಗಳ ಅಪೂರ್ವ ಸಂಗಮವೇ ಸರಿ. ಇದು ಭಗವಂತನು ಮಾನವ ಕುಲವನ್ನು ಸಮೀಪಿಸುವ ಬಗೆಯಾಗಿದೆ. ಇದರಿಂದ ತತ್ತ್ವಜ್ಞಾನವನ್ನು ಅರಿಯಲಾಗದ ಮತ್ತು ಭಗವಂತನಲ್ಲಿ ಮನಸ್ಸನ್ನು ಏಕಾಗ್ರಗೊಳಿಸಲಾಗದ ಸಾಮಾನ್ಯ ಜನರೂ ಕೂಡ ಅವತಾರಪುರುಷರ ದಿವ್ಯಲೀಲೆಗಳ ಮತ್ತು ಆತನ ಸಹವರ್ತಿಗಳ ಭಕ್ತಿಭಾವಗಳ ಅಧ್ಯಯನದಿಂದ ಭಗವಂತನ ಸ್ಮರಣೆಯನ್ನು ಪಡೆಯಬಹುದು (ಶ್ರೀಮದ್ ಭಾಗವತ, ಸಂಪುಟ ೪, ಪುಟ ೨೪೧).

ವ್ಯಾಕುಲಚಿತ್ತನಾಗಿ ಭಗವಂತನಿಗಾಗಿ ಅಳುವವನು ಅವನನ್ನು ಪಡೆಯುವನೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅವರ ಪ್ರಕಾರ, ವ್ಯಾಕುಲತೆಯೇ ಆಧ್ಯಾತ್ಮಿಕ ಜೀವನದ ಸಾರ. ಭಗವಂತನ ದಿವ್ಯಕರ್ಮ ಮತ್ತು ಜನ್ಮಗಳನ್ನು ಯಾರು ಯಥಾವತ್ತಾಗಿ ತಿಳಿದಿರುವರೋ ಅವರು ದೇಹವನ್ನು ತ್ಯಜಿಸಿದಾಗ, ತನ್ನನ್ನೇ ಹೊಂದುವರೆಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ. ಅದರಂತೆಯೇ ಶ್ರೀರಾಮಕೃಷ್ಣರ ದಿವ್ಯನಾಮವನ್ನು ಉಚ್ಚರಿಸುತ್ತ, ಅವರ ದಿವ್ಯಲೀಲೆಗಳಲ್ಲಿ ತಮ್ಮ ಮನಸ್ಸನ್ನು ತೊಡಗಿಸಿಕೊಂಡಾಗ, ನಮಗೆ ಚಿತ್ತಶುದ್ಧಿಯಾಗುವುದು. ಆ ಮೂಲಕ ಭಗವತ್ಸಾಕ್ಷಾತ್ಕಾರವನ್ನು ಹೊಂದುವ ಯೋಗ್ಯತೆ ನಮಗೆ ಬರುವುದು.

**ಸೇವಾಯೋಗದಿಂದ ಚಿತ್ತಶುದ್ಧಿ**

ಭಗವದ್ಗೀತೆಯ ಒಂದು ಶ್ಲೋಕವು ಹೀಗೆ ಹೇಳುತ್ತದೆ:

**ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ ।**
**ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥**
(೪:೧೦)

"ಯಾರು ರಾಗ, ಭಯ ಮತ್ತು ಕ್ರೋಧಗಳನ್ನು ತ್ಯಜಿಸಿ ನನ್ನಲ್ಲೇ ಮನಸ್ಸನ್ನಿಟ್ಟು, ನನ್ನನ್ನೇ ಆಶ್ರಯಿಸಿರುತ್ತಾರೋ, ಅವರು ಜ್ಞಾನಾಗ್ನಿಯಿಂದ ಪರಿಶುದ್ಧರಾಗಿ ನನ್ನನ್ನೇ ಹೊಂದುತ್ತಾರೆ."

ಇಲ್ಲಿ ಶ್ರೀಕೃಷ್ಣ ಬೋಧಿಸುವ ಮುಕ್ತಿಮಾರ್ಗವು ಕ್ರಮಮುಕ್ತಿಯದಾಗಿದೆ. ಇದಕ್ಕಾಗಿ ಚಿತ್ತಶುದ್ಧಿ ಅತ್ಯಂತ ಅವಶ್ಯಕ. ಸಮರ್ಪಣಾಭಾವದಿಂದ ಕರ್ಮ ಮಾಡಿದರೆ ಚಿತ್ತಶುದ್ಧಿಯನ್ನು ಪಡೆಯಬಹುದೆಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಅಡಿಗಡಿಗೆ ಬೋಧಿಸುತ್ತಾನೆ. ಇದನ್ನೇ ಶ್ರೀರಾಮಕೃಷ್ಣರು 'ಶಿವಜ್ಞಾನದಿಂದ ಜೀವಸೇವೆ' ಎಂಬ ತಮ್ಮ ಸರಳ ಬೋಧನೆಯ ಮೂಲಕ ಭಗವತ್ಸಾಕ್ಷಾತ್ಕಾರದ ಮಾರ್ಗವನ್ನಾಗಿ ಉಪದೇಶಿಸುತ್ತಾರೆ. ಇದರ ಅರ್ಥ ಪ್ರತಿಯೊಂದು ಜೀವಿಯಲ್ಲಿಯೂ ಭಗವಂತನಿದ್ದಾನೆ ಎಂಬ ಭಾವದಿಂದ, ಆತನಿಗೆ ಸಮರ್ಪಣೆಯಾಗಲಿ ಎಂಬ ಆರಾಧನಾಭಾವದಿಂದ ನಮ್ಮೆಲ್ಲ ಕೆಲಸಗಳನ್ನೂ ಮಾಡಬೇಕು ಎಂದು. ಇದು ಇಂದಿನ ಆಧುನಿಕ ಯುಗಕ್ಕೆ ಶ್ರೀರಾಮಕೃಷ್ಣರು ತೋರಿಸಿಕೊಟ್ಟ ಸೇವಾಯೋಗವಾಗಿದೆ. ಈ ಮಾರ್ಗವನ್ನು ಅವಲಂಬಿಸುವುದರಿಂದ ನಮ್ಮ ಇಡೀ ಜೀವನವನ್ನು ಆಧ್ಯಾತ್ಮೀಕರಣಗೊಳಿಸಿಕೊಳ್ಳಲು ಸಾಧ್ಯವಿದೆ. ಈ ಬೋಧನೆಯು ಉಪನಿಷತ್ತಿನ **'ಸರ್ವಂ ಖಲ್ವಿದಂ ಬ್ರಹ್ಮ'** (ಇವೆಲ್ಲವೂ ಬ್ರಹ್ಮವೇ) ಎಂಬ ವಾಕ್ಯವನ್ನು ಅನುಷ್ಠಾನಯೋಗ್ಯವನ್ನಾಗಿ ಮಾಡುತ್ತದೆ. ಎಲ್ಲ ಕಡೆ ಭಗವಂತನನ್ನು ಕಂಡಾಗ ತಾನೇ ನಾವು ನಿಜವಾಗಿ ಸೇವೆ ಮಾಡಲು ಸಾಧ್ಯ?

ಸಂನ್ಯಾಸಿಯಾಗಲೀ, ಗೃಹಸ್ಥನಾಗಲೀ ಶ್ರೀರಾಮಕೃಷ್ಣರ ಸೇವೆಯನ್ನು ಯಾವುದೇ ಆಸಕ್ತಿಯಿಲ್ಲದೆ ಮಾಡಬೇಕಾದುದು ಬಹು ಮುಖ್ಯ. ಇಂತಹ ಅವಿರತ ನಿಸ್ವಾರ್ಥ ಸೇವೆಯು, ಬಹಳ ಕಾಲದ ಅಭ್ಯಾಸದ ನಂತರ, ಶ್ರೀರಾಮಕೃಷ್ಣರನ್ನು ನಿರಂತರವಾಗಿ ಸ್ಮರಿಸುವ ಸಾಮರ್ಥ್ಯವನ್ನು ತಂದುಕೊಡುತ್ತದೆ. ಇದರಿಂದ ಬಾಳಿನಲ್ಲಿ ಶಾಂತಿ, ಆನಂದ ಮತ್ತು ಸಮಾಧಾನಗಳು ಉಂಟಾಗುತ್ತವೆ.

**ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।**
**ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥** (೪:೨೨)

"ತನಗೆ ಪ್ರಾಪ್ತವಾದದ್ದರಲ್ಲಿ ಸಂತುಷ್ಟನಾಗಿದ್ದುಕೊಂಡು, ಸುಖದುಃಖಗಳೆಂಬ ದ್ವಂದ್ವಗಳಿಗೆ ಅತೀತನೂ, ಅಸೂಯೆಯ ಭಾವ ಇಲ್ಲದವನೂ, ಸಾಫಲ್ಯ–ವೈಫಲ್ಯಗಳನ್ನು ಸಮನಾಗಿ ನೋಡುವವನೂ ಆದವನು ಶೋಕಕ್ಕೆ ಒಳಗಾಗುವುದಿಲ್ಲ."

ಶ್ರೀರಾಮಕೃಷ್ಣರು ತೋರಿಸಿಕೊಟ್ಟ ಈ ಕ್ರಮಮುಕ್ತಿಯ ಮಾರ್ಗವು ಕರ್ಮಯೋಗದ ರೂಪದಲ್ಲಿ ಸ್ವಾಮಿ ವಿವೇಕಾನಂದರಿಂದ ಉಪದೇಶಿಸಲ್ಪಟ್ಟಿದೆ. ಆಸಕ್ತಿರಹಿತ ಕರ್ಮದ ಮೂಲಕವೇ ಭಗವತ್ಸ್ಮರಣೆಯನ್ನೂ, ಶಾಂತಿ ಸಮಾಧಾನಗಳನ್ನೂ ಹೊಂದುವುದು ಇದರ ವೈಶಿಷ್ಟ್ಯವಾಗಿದೆ. ಈ ಮಾರ್ಗವನ್ನು ಅವಲಂಬಿಸಿದ ಜನರು ಹೆಚ್ಚು ಹೆಚ್ಚಾದಂತೆಲ್ಲ, **ಸತ್ಯ, ಅನುಕಂಪ, ತಪಸ್ಸು ಮತ್ತು ದಾನಗಳೆಂಬ** ಧರ್ಮದ ನಾಲ್ಕು ಪಾದಗಳು ಈ ಭುವಿಯಲ್ಲಿ ಭದ್ರವಾಗಿ ನೆಲೆಗೊಳ್ಳುತ್ತವೆ. ಹೀಗೆ ಸತ್ಯಯುಗದ ಸ್ಥಿತಿಯು ನಿಧಾನವಾಗಿ ವಿಕಸಿತಗೊಳ್ಳುತ್ತದೆ. ಶ್ರೀರಾಮಕೃಷ್ಣರು ತಮ್ಮ ಅವತಾರ ಕಾಲದಲ್ಲಿ ಈ ಮಹಾನ್ ಆಂದೋಲನಕ್ಕೆ ಪ್ರಚೋದನೆ ಕೊಟ್ಟಿದ್ದಾರೆ. ಅದು ಸಂಪೂರ್ಣವಾಗಿ ಮೈದೋರಲು ಹಲವಾರು ಶತಮಾನಗಳೇ ಬೇಕಾಗಬಹುದು. ಆದರೆ ಅದು ಆಗುವುದಂತೂ ಖಂಡಿತ.